tion?

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- ಇದರಲ್ಲಿ ಏನಾಗಿದೆ ಅಂದರೆ, ತಮ್ಮ ಕೂಸನ್ನು ನಮಗೆ ಕೊಟ್ಟು ಸಾಕು ಸಾಕು ಎಂದು ಹೇಳಿದರೆ ಹೇಗೆ ?

ಶ್ರೀ ಎಸ್.ಹೆಚ್.ಕೌಜಲಗಿ:- ತಾವು ಒಂದೇ ಒಂದು ಕೆಲಸವನ್ನು ಮಾಡಿಲ್ಲ. 1986ರಲ್ಲಿ ಈ ಕಾರ್ಪೊರೇಷನ್ ಉದ್ಘಾಟಿಸಿತು. ಈ ಕಾರ್ಪೊರೇಷನ್ ಆದನಂತರ ಇವತ್ತಿನ ತನಕ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ತಾವು ಒಂದು ಕೆಲಸವನ್ನು ಮಾಡಿ ಮುಗಿಸಿದ್ದೀರಾ ಎಂದು ಕೇಳುತ್ತೇನೆ.

ಶ್ರೀ ಕೆ.ಎಸ್ ಮಲ್ಲಿಕಾರ್ಜುನ ಪ್ರಸನ್ನ:- ಇವರು ತಮ್ಮ ಕೂಸನ್ನು ನಮಗೆ ಕೊಟ್ಟು ಚೆನ್ನಾಗಿ ಸಾಕು ಎಂದು ಹೇಳುತ್ತಾರೆ. ಅದು ಹೇಗಿದೆ ಅಂದರೆ ಖಾಯಿಲೆ ಕಸಾಲೆ ಏನೇನೋ ಆಗಿ ಬಹಳ ರಂಪಾಗಿ ಹೋಗಿದೆ ಮತ್ತು ಅದಕ್ಕೆ ರೋಗಗಳು ಇವೆ. ಅದನ್ನು ಡಾಕ್ಟರ್ ಹತ್ತಿರ ತಂದು ಇಂಜೆಕ್ಷನ್ ಕೊಡಿಸಿ ರೆಡಿ ಮಾಡಿ ಓಡಾಡತಕ್ಕ ಒಂದು ಮಗುವಾಗಿ ಮಾಡಿದ್ದೇವೆ. ಈ ಕೆಲಸವನ್ನು ಮಾಡುತ್ತೇವೆ. ನಾನು ಮಾನ್ಯ ಕೌಜಲಗಿಯವರನ್ನು ಸಹಿತ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ನೀವು ವಿರೋಧ'ಪಕ್ಷದಲ್ಲಿದ್ದುಕೊಂಡು ಮಾತನಾಡಬೇಕೆಂದು ಮಾತನಾಡುತ್ತೀರಿ. ಅಡವಿನತೊಳಬಾವಿಯಾಗಿದೆ, ಲಿಂಗಾಪುರ ಆಗಿದೆ.

ಶ್ರೀ ವಾಟಾಳ್ ನಾಗರಾಜ್:- ಆ ಕೂಸು ಬದುಕುತ್ತದೆಯೇ

ಶ್ರೀ ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಬದುಕಿದರೆ ನಾವೆಲ್ಲ ಫಾರಿನ್‌ನಿಂದ ಇಂಜೆಕ್ಷನ್ ತರಿಸಿ ಅದಕ್ಕೆ ಕೊಟ್ಟು ಏನೇನೊ ಮಾಡಿದ್ದೇವೆ. ಚಿಕ್ಕಆಸವಿ ಸುಮಾರು 23 ಲಕ್ಷ ರೂಪಾಯಿಗಳ ಯೋಜನೆ. ಅಡವಿಯ ತೊಳಬಾವಿ ಸುಮಾರು 2ಕೋಟಿ ರೂಪಾಯಿಯ ಒಂದು ಯೋಜನೆ. ಕಾರಾಗಾಣ 25 ಲಕ್ಷ, ಲಿಂಗಪುರ 50 ಲಕ್ಷ ರೂಪಾಯಿಯ ಯೋಜನೆಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. (11-50 ಎ.ಎಂ.) ಎಂಟು ಯೋಜನೆಗಳನ್ನು ನಮ್ಮ ಮೈಸೂರು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ನಾವು ಇಟ್ಟುಕೊಂಡಿದ್ದೇವೆ. ಅದನ್ನು ಏನಾದರು ಮಾಡಿ ಉಳಿಸಬೇಕು. I don't want to proceed over with those liquidation corporations ಎನ್ನತಕ್ಕಂಥ ತೀರ್ಮಾನವನ್ನು ನಾವು ಕೈಗೊಂಡಿದ್ದೇವೆ. ನಿಮ್ಮೆಲ್ಲರ ಸಹಕಾರ ಇದ್ದರೆ ಖಂಡಿತವಾಗಿಯೂ ಲಿಕ್ವಿಸೇಷನ್ ಆಗುವುದಿಲ್ಲ. ಅದು ಕೆಲಸ ಮಾಡಿಯೇ ಮಾಡುತ್ತದೆ . ಒಳ್ಳೆಯ ರಿಸಲ್ಟ್‌ನ್ನೂ ಸಹ ತಂದುಕೊಂಡುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಮಗೆ ಹೇಳಬಯಸುತ್ತೇನೆ.

ಜಿಲ್ಲಾ ಪರಿಷತ್ ರಸ್ತೆಗಳನ್ನು ವಹಿಸಿಕೊಳ್ಳುವುದು.

(951)ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಜಿಲ್ಲಾಪರಿಷತು, ವ್ಯಾಪ್ತಿಯಿಂದ ಈ ವರ್ಷ ಎಷ್ಟು ಕಿಲೋಮೀಟರ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಸರ್ಕಾರ ತೀರ್ಮಾನಿಸಿದೆ.

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಸರ್ಕಾರದ ಆದೇಶ ಸಂಖ್ಯೆ : ಪಿಡಬ್ಲ್ಯೂಡಿ 68 ಸಿಆರ್‌ಎಂ 89 ದಿನಾಂಕ: 18-2-92ರ ಪ್ರಕಾರ, ಜಿಲ್ಲಾ ಪರಿಷತ್‌ಗಳ ವ್ಯಾಪ್ತಿಯಲ್ಲಿರುವ ರಸ್ತೆಗಳಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ. ಮೀರದಂತೆ ಒಟ್ಟು 10,000 ಕಿ.ಮೀ. ಉದ್ದದ ರಸ್ತೆಗಳನ್ನು

ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ಅನುಮೋದನೆ ನೀಡಲಾಗಿದೆ. ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಶೀಘ್ರದಲ್ಲಿ ನಿರ್ಧರಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈ ಪ್ರತಿ ಶಾಸಕರ ಕ್ಷೇತ್ರದಲ್ಲಿ ಐವತ್ತು ಕಿಲೋ ಮೀಟರ್ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ವಶಪಡಿಸಿಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಇದಕ್ಕೆ ಈಗಾಗಲೇ ವಶಪಡಿಸಿಕೊಳ್ಳತಕ್ಕಂಥದ್ದು ಎಷ್ಟು ಮಾಡಿದ್ದೀರಿ? ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ?ಯಾವತ್ತು ಇದರ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತೀರಿ ? ಈಗ ಬರೀ ಸುಮ್ಮನೆ ಹೇಳಿದ್ದೀರಿ, 50 ಕಿಲೋ ಮೀಟರ್ ರಸ್ತೆಗಳನ್ನು ವಹಿಸಿಕೊಳ್ಳುತ್ತೇವೆ, ನೀವೆಲ್ಲಾ ಅರ್ಜಿಗಳನ್ನು ಕೊಡಿ ಎಂದು ಹೇಳಿದ್ದೀರಿ. ಯಾವ ಯಾವ ರಸ್ತೆಗಳನ್ನು ಸೇರಿಸಬೇಕು ಎಂದು ನಾವೆಲ್ಲಾ ಅನೇಕರು ತಮಗೆ ಮನವಿಗಳನ್ನು ಕೊಟ್ಟಿದ್ದೇವೆ ಈ ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮ ಯಾವಾಗ ಪ್ರಾರಂಭ ಮಾಡುತ್ತೀರಿ ? ಈಗ ಎಷ್ಟು ರಸ್ತೆಗಳು ನಿಮಗೆ ಬಂದಿದೆ ? ಎಷ್ಟು ರಸ್ತೆಗಳನ್ನು ಖಾಯಂ ಮಾಡತಕ್ಕಂಥ ವ್ಯವಸ್ಥೆ ಇದೆ, ಲೋಕೋಪಯೋಗಿ ಇಲಾಖೆಗೆ ಸೇರಿಸತಕ್ಕಂಥ ವ್ಯವಸ್ಥೆ ಎಷ್ಟಾಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ಒಟ್ಟು ಹತ್ತು ಸಾವಿರ ಕಿಲೋ ಮೀಟರ್ ಜಿಲ್ಲಾ ಪರಿಷತ್ ರಸ್ತೆಗಳನ್ನು ಅಪ್‌ಗ್ರೇಡ್ ಮಾಡುವುದಕ್ಕೋಸ್ಕರ ತೆಗೆದುಕೊಂಡಿದ್ದೇವೆ. ಏಪ್ರಿಲ್ ತಿಂಗಳಿಂದ ಇದು ಜಾರಿಗೆ ಬರುತ್ತದೆ. ಪ್ರತಿ ಕ್ಷೇತ್ರಕ್ಕೂ ಕೂಡ 50 ಕಿಲೋ ಮೀಟರ್ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಅದಕ್ಕೆ ರಿಪೇರಿ ಮಾಡಬೇಕು ಒಟ್ಟು ಸುಮಾರು ಹತ್ತು ಸಾವಿರ ಕಿಲೋ ಮೀಟರ್ ರಸ್ತೆಗಳನ್ನು ಏನು ತೆಗೆದುಕೊಂಡಿದ್ದೇವೆ, ಅದಕ್ಕೆ 13 ಕೋಟಿ ಬರೀ ರಿಪೇರಿಗೋಸ್ಕರ ಮತ್ತು ಅಭಿವೃದ್ಧಿಗೋಸ್ಕರ 15 ಕೋಟಿ, ಒಟ್ಟು 28 ಕೋಟಿ ರೂಪಾಯಿಗಳನ್ನು ನಾವು ಒಂದು ವರ್ಷಕ್ಕೆ ಖರ್ಚು ಮಾಡುತ್ತೇವೆ. ಹತ್ತು ಸಾವಿರ ಕಿಲೋ ಮೀಟರ್ ಜಿಲ್ಲಾ ಪರಿಷತ್ತಿನ ರಸ್ತೆಗಳನ್ನು ಅಪ್‌ಗ್ರೆಡೇಷನ್‌ಗೆ ನಾವು ಏನು ತೆಗೆದುಕೊಂಡಿದ್ದೇವೆ. ಅದಕ್ಕೆ ಪ್ರತಿ ವರ್ಷ ಕೂಡ 28 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಇದರಿಂದ ಹಂತ ಹಂತವಾಗಿ ಎಲ್ಲಾ ರಸ್ತೆಗಳು ಕೂಡಾ ಪಕ್ಕಾ ರಸ್ತೆಗಳಾಗುತ್ತವೆ. ಅದರ ಬಗ್ಗೆ ಅನುಮಾನಪಡಬೇಕಾಗಿಲ್ಲ. ಈ ತಿಂಗಳಿನಿಂದಲೇ ಇದು ಜಾರಿಗೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈಗ ಅನುಮಾವ ಏನೂ ನಾನು ಪಡುತ್ತಿಲ್ಲ. ಈಗ ನೀವು ಏನು ಮಾಡಿದ್ದೀರಿ ಎಂದರೆ ಮೂಗಿನ ಮೇಲೆ ತುಪ್ಪ ಹಚ್ಚಿದ್ದೀರಿ. ಆ ವಾಸನೆ ಕುಡಿಯಿರಿ ಎನ್ನತಕ್ಕಂಥ ಪ್ರಶ್ನೆ ನಿಮ್ಮದು. ಅದರಿಂದ ತುಪ್ಪ ಬಾಯಿಗೆ ಬರಬೇಕು. ಬರೀ ಮೂಗಿನ ಮೇಲೆ ತುಪ್ಪ ಹಚ್ಚಿ ನೀವು ರಾಜಕೀಯ ಮಾಡುವುದು ಬೇಡ, ರಾಜಕಾರಣವನ್ನು ಮಾಡುವುದು ಬೇಡ. ದಯಮಾಡಿ ತಮಗೆ ನಾನು ಏನು ಹೇಳುತ್ತೇನೆ ಎಂದರೆ, ಈಗ ಐವತ್ತು ಕಿಲೋಮೀಟರ್ ರಸ್ತೆಗಳನ್ನು ಏನೇನು ತೆಗೆದುಕೊಂಡಿದ್ದೀರಿ, ಇದಕ್ಕಾಗಿ ಈ ವರ್ಷ ಎಷ್ಟು ಹಣವನ್ನು ಇಟ್ಟಿದ್ದೀರಿ ? ಯಾವಾಗ ಇದರ ಅಭಿವೃದ್ಧಿ ಕಾರ್ಯಕ್ರಮ ಪ್ರಾರಂಭ ಮಾಡುತ್ತೀರಿ ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೆ ಉತ್ತರದಲ್ಲಿ ಹೇಳಿದ್ದೇವೆ. ಪ್ರತಿ ವರ್ಷ ಕೂಡ 13 ಕೋಟಿ ಮತ್ತು 15 ಕೋಟಿ, ಒಟ್ಟು 28 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಸುಮಾರು ಹತ್ತು ಸಾವಿರ ಕಿಲೋ ಮೀಟರ್

ಬರುತ್ತದೆ. ಪ್ರತಿಯೊಬ್ಬರ ಶಾಸಕರ ಕ್ಷೇತ್ರದಲ್ಲೂ 50 ಕಿಲೋ ಮೀಟರ್ ರಸ್ತೆ ಬರುತ್ತದೆ. ಅದನ್ನು ರಿಪೇರಿ ಮಾಡುವುದಾಗಲಿ ಮತ್ತು ರಸ್ತೆಗಳನ್ನು ಅಗಲ ಮಾಡುವುದಾಗಲಿ ಅಥವಾ ಕನ್‌ವರ್ಟ್ ಕಟ್ಟುವುದಾಗಲೀ ಎಲ್ಲಾ ಸೇರಿ 28 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದೇ ಏಪ್ರಿಲ್ ತಿಂಗಳಿಂದ ಅದು ಜಾರಿಗೆ ಬರುತ್ತದೆ. ಅದರಿಂದ ಮೂಗಿಗೆ ತುಪ್ಪ ಹಚ್ಚುವುದೇನಿಲ್ಲ. ಬಾಯಿಗೆ ತುಪ್ಪ ಹಚ್ಚುವ ಪ್ರಶ್ನೆ ಇಲ್ಲ. ಅದಕ್ಕೆ ಹಣವನ್ನು ಕೂಡ ನಾವು ಮೀಸಲಿಟ್ಟಿದ್ದೇವೆ.

ಶ್ರೀ ಎಸ್.ಹುಚ್ಚಮಾಸ್ತಿಗೌಡ:- ಮಾನ್ಯ ಅಧ್ಯಕ್ಷರೇ, ಇದನ್ನು ಯಾವ ದರ್ಜೆಯ ರೋಡನ್ನಾಗಿ ಬದಲಾವಣೆ ಮಾಡಿ, ಎಷ್ಟು ವರ್ಷದಲ್ಲಿ ಇದನ್ನು ಕಂಪ್ಲೀಟ್ ಮಾಡತಕ್ಕಂಥ ಯೋಜನೆ ತಮ್ಮ ಹತ್ತಿರ ಇದೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ಯೋಜನೆ ಪ್ರಕಾರ28 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಕೂಡ ಹತ್ತು ಸಾವಿರ ಕಿಲೋಮೀಟರ್‌ಗೆ ಖರ್ಚು ಮಾಡುತ್ತಿದ್ದೇವೆ. ಎಲ್ಲಾ ರಸ್ತೆಗಳು ಪಕ್ಕಾ ರಸ್ತೆಗಳಾಗಬೇಕಾದರೆ ಸ್ಟೇಟ್ ಹೈವೇ ಲೆವೆಲ್‌ನಲ್ಲಿ ಬರುತ್ತದೆ. ಟ್ಯಾರ್ ಎಲ್ಲಾ ಹಾಕಬೇಕಾದರೆ ಸುಮಾರು ಹತ್ತು ವರ್ಷಗಳು ಬೇಕಾಗುತ್ತದೆ. ಸನ್ಮಾನ್ಯ ಸದಸ್ಯರಿಗೆ ಸಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹತ್ತು ವರ್ಷಗಳಲ್ಲಿ ಎಲ್ಲಾ ಪಕ್ಕಾ ರಸ್ತೆಗಳಾಗುತ್ತವೆ.

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಲೋ. ಮೀಟರ್ ರಸ್ತೆ ಎಂದು ಹೇಳಿ ಸರ್ಕಾರಿ ಆಜ್ಞೆಯನ್ನು ಕೂಡ ಹೊರಡಿಸಿದ್ದಾರೆ. ನಮ್ಮಿಂದ ಸಲಹೆಗಳನ್ನೂ ಕೂಡ ಪಡೆಯುತ್ತಿದ್ದಾರೆ. ಆದರೆ ಇಲ್ಲಿ ಆಗಿರತಕ್ಕಂಥದ್ದು ಏನೆಂದರೆ, ಕೆಲವು ಬಹಳ ಚಿಕ್ಕದಾಗಿರತಕ್ಕಂಥ ಕ್ಷೇತ್ರಗಳು ಇರುತ್ತವೆ. ಮುನಿಸಿಪಾಲಿಟಿಗೆ ಸೇರಿಸತಕ್ಕಂಥ ಕ್ಷೇತ್ರಗಳೂ ಕೂಡ ಇರುತ್ತವೆ. ಮುನಿಸಿಪಾಲಿಟಿಗೆ ಸೇರಿರತಕ್ಕ ಕ್ಷೇತ್ರಗಳೂ ಇವೆ. ಮುನಿಸಿಪಾಲಿಟಿ ಏರಿಯಾ ಆದಮೇಲೆ ಬಹಳ ಕಡಿಮೆ ಪ್ರದೇಶ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥಾದ್ದು ಕೂಡ ಇವೆ. ಈ ರೀತಿ ಕ್ಷೇತ್ರದಿಂದ ಕ್ಷೇತ್ರಕ್ಕೆ ವ್ಯತ್ಯಾಸ ಆಗುತ್ತಿರುವ ಕಾರಣದಿಂದ ಈ ಕೆಲವು ಕ್ಷೇತ್ರಗಳಲ್ಲಿ ಬರೀ ಹಳ್ಳಿಗಳೇ ಇವೆ. ಆ ಹಳ್ಳಿಗಳಲ್ಲಿ ರಸ್ತೆಗಳು ಉದ್ದುದ್ದಕ್ಕೂ ಹೋಗಬೇಕಾಗುತ್ತದೆ. ಆದ್ದರಿಂದ ಈ 50 ಕಿ .ಲೋ ಮೀಟರ್ ಎನ್ನತಕ್ಕಂಥದ್ದನ್ನು ತಾವು ಪುನರ್ ವಿಮರ್ಶೆ ಮಾಡಿ, ಆ ವಿಸ್ತೀರ್ಣ ಅಂದರೆ ಯಾವ ಯಾವ ಕ್ಷೇತ್ರದಲ್ಲಿ ಎಷ್ಟು ಸ್ಕ್ವೇರ್ ಕಿಲೋಮೀಟರ್ ಇದೆ, ಅದನ್ನು ಆಧಾರವಾಗಿ ಇಟ್ಟುಕೊಂಡು ತಾವು ಈ ರಸ್ತೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ:- ಸನ್ಮಾನ್ಯ ಸದಸ್ಯರಾದ ಕೌಜಲಗಿಯವರು 12ಲಕ್ಷ ರೂಪಾಯಿಗಳನ್ನು ಪ್ರತಿ ಕ್ಷೇತ್ರಕ್ಕೂ ಹೋದ ಸಲ ಒದಗಿಸಿಕೊಟ್ಟಿದ್ದರು, ಆ ಕೆಲವಾಗಿಲ್ಲ ಎಂದು ಹೇಳಿದರು. ನಾನು ಹೇಳಬೇಕಾಗುತ್ತದೆ, ಬಜೆಟ್ ಅಧಿವೇಶನದಲ್ಲಿ ಉತ್ತರ ಕೊಡಬೇಕಾದರೆ ಅವರು ಇರಲಿಲ್ಲ. ಮೊನ್ನೆ ತಾನೆ ಅಂದರೆ ಹೋದ ತಿಂಗಳು ಹತ್ತು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಹತ್ತು ಕೋಟಿ ರೂಪಾಯಿಗಳಿಂದ ಪ್ರತಿಯೊಂದು ಶಾಸಕರ ಕ್ಷೇತ್ರದಲ್ಲೂ ಕೂಡ ಏನು 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವೋ ಆ ಎಲ್ಲಾ ಕೆಲಸಗಳು ಪೂರ್ತಿಯಾಗುತ್ತದೆ. ಆ ಬಿಲ್ಲುಗಳನ್ನು ಕೂಡ ಪಾವತಿ ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದೇನೆ. ಸುಮಾರು 1-2 ಕೋಟಿ ಉಳಿದಿದ್ದರೆ ಆ ಕೆಲಸವನ್ನು ಬರುವ ವರ್ಷದಲ್ಲಿ ಮಾಡಿಕೊಡುವುದಕ್ಕೆ ನಮಗೆ ಇಷ್ಟವಿದೆ. ಮತ್ತು ಸರ್ಕಾರ ಅದನ್ನು ಮಾಡಿಯೇ ಮಾಡುತ್ತದೆ. ಮತ್ತೆ ಸನ್ಮಾನ್ಯ ಸದಸ್ಯರಾದ ಭೈರೇಗೌಡರು ಕೆಲವು ಕ್ಷೇತ್ರಗಳಲ್ಲಿ ಬರೀ ಹಳ್ಳಿಗಳೇ ಇವೆ ಎಂದು ಹೇಳಿದರು. ನಮಗೆ ಗೊತ್ತಿದೆ ಇನ್ನೊಂದು

ಸ್ಕೀಮನ್ನು ನಾವು ಕೊಟ್ಟಿದ್ದೇವೆ. ಪ್ರತಿ ಕ್ಷೇತ್ರದಲ್ಲೂ ಕೂಡ ಮೂರು ವರ್ಷದಲ್ಲಿ ಸುಮಾರು 12 ರಿಂದ 13 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅದು ಎಂಟೈರ್ ಕರ್ನಾಟಕ ಪ್ರದೇಶಕ್ಕೆ ರಸ್ತೆಗಳಿಗೋಸ್ಕರ, ಎಂಎಲ್ ಎ ಕ್ಷೇತ್ರದಲ್ಲಿ ಕೊಟ್ಟಿರತಕ್ಕಂಥದ್ದು. ಪ್ರತಿ ಕ್ಷೇತ್ರಕ್ಕೂ ಕೂಡ 40 ಲಕ್ಷ, 30 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಆ ಸ್ಕೀಮ್‌ನಲ್ಲಿ ತಮ್ಮ ರಸ್ತೆಗಳನ್ನು ಸೇರಿಸಬಹುದೇ ಹೊರತು ಈ 50 ಕಿಲೋಮೀಟರ್‌ನಲ್ಲಿ ಆಗುವುದಿಲ್ಲ.

ಶ್ರೀ ಸಿ.ಭೈರೇಗೌಡ:- ಅದಕ್ಕೆ ನಾನು ಹೇಳುತ್ತಿರುವುದು. ಕೆಲವು ಚಿಕ್ಕದು ಇದೆ, ಕೆಲವು ದೊಡ್ಡದು ಇವೆ. ದೊಡ್ಡ ಏರಿಯಾ ಇರತಕ್ಕಂಥ ಕ್ಷೇತ್ರದಲ್ಲಿ ಹೆಚ್ಚಿಗೆ ರಸ್ತೆಗಳು ದಯವಿಟ್ಟು ತೆಗೆದುಕೊಳ್ಳಿ ಎಂದು ನನ್ನ ವಿನಂತಿ. ದಯವಿಟ್ಟು ಇವತ್ತು ಏನು ಮಾಡಿದ್ದೀರಿ, ಅದನ್ನು ರಿವೈಸ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿ ಎಂದು ಹೇಳುತ್ತೇನೆ.

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ:- ಕೆಲವು ಕ್ಷೇತ್ರಗಳಲ್ಲಿ ಮೂರು ತಾಲ್ಲೂಕುಗಳು ಸೇರಿರುತ್ತವೆ. ಮೂರು ತಾಲ್ಲೂಕುಗಳಿಗೆ 150 ಕಿಲೋ ಮೀಟರ್ ಬೇಕಾಗುತ್ತದೆ. ಆ ರೀತಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಬೇರೆ ದಾರಿಯೂ ಇದೆ.

ಶ್ರೀ ಸಿ.ಭೈರೇಗೌಡ:- ತಾವು ಕ್ಷೇತ್ರದ ಪ್ರಕಾರ ಮಾಡುತ್ತಿದ್ದೀರಿ. ಕ್ಷೇತ್ರದ ವಿಸ್ತೀರ್ಣದಲ್ಲಿ ಕೆಲವು ಬಹಳ ಚಿಕ್ಕದು, ಕೆಲವು ಬಹಳ ದೊಡ್ಡದು ಇವೆ. ಆದ್ದರಿಂದ ವಿಸ್ತೀರ್ಣಕ್ಕನುಗುಣವಾಗಿ ಒಂದು ಚದರ ಕಿಲೋಮೀಟರ್‌ಗೆ ಇಷ್ಟು ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಒಂದು ನೀತಿಯನ್ನು ಪಾಲ್ಮಿಸಿದರೆ ವೈಜ್ಞಾನಿಕವಾದ ರೀತಿಯಲ್ಲಿ ತೀರ್ಮಾನವನ್ನು ತೆಗೆದುಕೊಂಡಂತೆ ಆಗುತ್ತದೆ. ದಯವಿಟ್ಟು ಆಜ್ಞೆಯನ್ನು ಮಾಡಿ.

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ:- ಮಾನ್ಯ ಅಧ್ಯಕ್ಷರೇ, ಇದರಿಂದ ಸ್ವಲ್ಪ ತೊಂದರೆಯೂ ಕೂಡ ಬರುತ್ತದೆ. ಪ್ರತಿಯೊಬ್ಬರೂ ಕೂಡ ತಮ್ಮ ಕ್ಷೇತ್ರ ದೊಡ್ಡದು ಇದೆ ಎಂದು ಹೇಳುತ್ತಾರೆ, ಅಳತೆ ಮಾಡಿ ಎಂದು ಹೇಳುತ್ತಾರೆ. ಅದಕ್ಕೆ ಬೇರೆ ಯೋಜನೆಯನ್ನು ತಯಾರು ಮಾಡಿದ್ದೇವೆ. ಪ್ರತಿ ಕ್ಷೇತ್ರದಲ್ಲಿ ಕೂಡ ಒಬ್ಬರು ಎಂ.ಎಲ್.ಎ. ತನ್ನ ಕ್ಷೇತ್ರಕ್ಕೆ ಕೆಲಸವಾಗಬೇಕು ಎಂದು ಹೇಳಿದರೆ ಸುಮಾರು 30 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಹಣವನ್ನು ಕೊಡುತ್ತಿದ್ದೇವೆ ಈ 30 ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ಖರ್ಚುಮಾಡಬೇಕಾಗಿದೆ. ಅದರಲ್ಲಿ ತಾವು ಆ ರಸ್ತೆಗಳನ್ನು ಹೇಳಿದರೆ ತೆಗೆದುಕೊಳ್ಳಬಹುದು. ಇದು ಕ್ಷೇತ್ರವಾರು ಮತ್ತು ವಿಸ್ತೀರ್ಣವಾರು ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಅದರಿಂದ ಮಲೆನಾಡು ಸೀಮೆಯಲ್ಲಿ ಬಹಳಷ್ಟು ಕ್ಷೇತ್ರಗಳು ಮೂರು ತಾಲ್ಲೂಕು ಎರಡು ತಾಲ್ಲೂಕುಗಳು ಸೇರಿರುತ್ತವೆ. ರಸ್ತೆ ಮಾತ್ರ ಸಾವಿರ ಕಿಲೋಮೀಟರ್ ತನಕ ಇರುತ್ತದೆ. ಅವರಿಗೆ ಕೊಡಬೇಕಾದರೆ ಐದಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಬಹಳ ಕಷ್ಟ ಪರಿಸ್ಥಿತಿ ಬರುತ್ತದೆ. ಅದಕ್ಕೆ ಈ ಮೂವತ್ತು ಕೋಟಿ ರೂಪಾಯಿಗಳು ಯೋಜನೆ ಏನು ಇದೆ, ಇದರಲ್ಲಿ ಪ್ರತಿ ಕ್ಷೇತ್ರದಲ್ಲಿಯೂ ಕೂಡ ಖರ್ಚು ಮಾಡಬೇಕು ಮತ್ತು ಒಂದು ತಾಲ್ಲೂಕಿನಲ್ಲಿ ಒಂದು ಕ್ಷೇತ್ರದಲ್ಲಿ 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬಹುದು ಎಂದು ಮೂರು ವರ್ಷದಲ್ಲಿ ಈ ಸ್ಕೀಮನ್ನು ತಯಾರು ಮಾಡಿದ್ದೇವೆ.

ಶ್ರೀ ಯು.ಕೆ.ಶಾಮಣ್ಣ:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಲೋಕೋಪಯೋಗಿ ಸಚಿವರು ಈಗಾಗಲೇ ಹೇಳಿದ ಹಾಗೆ ನನ್ನ ಕ್ಷೇತ್ರದಲ್ಲಿ ಬಹುಶ: ಮೂರು ತಾಲ್ಲೂಕುಗಳನ್ನು ಹೊಂದಿರತಕ್ಕಂಥ ಪ್ರದೇಶ ಇತ್ತು. ಅದು 650 ಕಿಲೋ ಮಾಟರ್ ರಸ್ತೆಗಳನ್ನು ಹೊಂದಿರುತ್ತದೆ. ಬಹುಶ: ಪ್ರತಿ ಸಂದರ್ಭದಲ್ಲೂ ಕೇಳಿದಾಗಲೂ ನಿಮಗೆ ಐವತ್ತು ಕಿಲೋಮೀಟರ್ ಅಲ್ಲ, ಜಾಸ್ತಿ ಕೊಡುತ್ತೇವೆ

ಎನ್ನುವ ಮಾತನ್ನು ಹೇಳಿದ್ದಾರೆಯೇ ಹೊರತು ಜಾಸ್ತಿ ಕೊಟ್ಟಿಲ್ಲ. ಮಲೆನಾಡು ಭಾಗದ ರಸ್ತೆಗಳು ಬಹಳ ವಿಸ್ತೀರ್ಣವಾಗಿರುತ್ತವೆ. ಈಗಾಗಲೇ ಮಾನ್ಯ ಭೈರೇಗೌಡರೂ ಸಹ ಈ ವಿಚಾರವನ್ನು ಹೇಳಿದ್ದಾರೆ. ಇದು ನಿಜಸ್ಥಿತಿಯಿರುವುದರಿಂದ ಐವತ್ತು ಕಿಲೋ ಮೀಟರ್ ರಸ್ತೆ ಕೊಟ್ಟರೆ ಬಹುಶ: ಇನ್ನು ಸಾಮಾನ್ಯವಾಗಿ ನಮ್ಮ ಮೊಮ್ಮಕ್ಕಳ ಕಾಲದಲ್ಲಿಯೂ ಸಹ ನಮ್ಮ ಭಾಗದ ರಸ್ತೆಯನ್ನು ಮಾಡಿ ಮುಗಿಸುತ್ತೇವೆ ಎಂದು ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ ಆದ್ಯತೆಯ ಮೇರೆಗೆ ಎಲ್ಲಿರಸ್ತೆಗಳ ವಿಸ್ತೀರ್ಣ ಹೆಚ್ಚಿಗೆ ಇದೆ, ಅಲ್ಲಿ ಹೆಚ್ಚಿಗೆ ರಸ್ತೆಗಳನ್ನು ಮಂಜೂರಾತಿ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಬರೀ ಆಶ್ವಾಸನೆಯನ್ನು ಕೊಟ್ಟರೆ ಮಾತ್ರ ಸಾಲದು, ಇಷ್ಟು ಕೊಡುತ್ತೇವೆ ಎಂದು ನಿಖರವಾಗಿ ಹೇಳಿದರೆ ನಾವು ಸಹಾ ಕ್ಷೇತ್ರದ ಜನರಿಗೆ ಹೇಳುವುದಕ್ಕೂ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ ಇದೆ. ಜೊತೆಗೆ ಅಭಿವೃದ್ಧಿಗೂ ಮತ್ತು ಓಡಾಟಕ್ಕೂ ಬಹಳ ತೊಂದರೆ ಇದೆ ಎನ್ನುವುದನ್ನು ಸಹ ಗಮನಿಸಬೇಕು.

ಶ್ರಿ ಜಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೆ ಉತ್ತರದಲ್ಲಿ ತಿಳಿಸಿದ್ದೇವೆ. ಅದಕ್ಕೆ ಬೇರೆ ಯೋಜನೆಯನ್ನೂ ಕೂಡ ತಯಾರು ಮಾಡಿದ್ದೇವೆ. ಎಲ್ಲಾ 224 ಕ್ಷೇತ್ರಗಳಿಗೂ ಮಾವತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ. ಪ್ರತಿವರ್ಷವೂ ಕೂಡ 13-14 ಲಕ್ಷ ರೂಪಾಯಿ ಬರುತ್ತದೆ. ಆ ಸ್ಕೀಮ್‌ಗಳಲ್ಲಾದರೂ ತಾವು ಬೇರೆ ತಾಲ್ಲೂಕುಗಳ ರಸ್ತೆಗಳು ಇವೆಯಲ್ಲ, ಅವುಗಳನ್ನು ಸೇರಿಸಬಹುದು ಎಂದು ನಾನು ಉತ್ತರದಲ್ಲಿ ಹೇಳಿದ್ದೇವೆ. ಮತ್ತೆ ಬೇರೆ ಪ್ರಶ್ನೆ ಬರುವುದಿಲ್ಲ.

ಶ್ರಿ ಡಿ.ಬಿ.ಚಂದ್ರೇಗೌಡ:-ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾ ಪರಿಷತ್ತಿನಿಂದ ಸುಮಾರು ಹತ್ತು ಸಹಸ್ರ ಕಿಲೋಮೀಟರ್ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ರಸ್ತೆಗಳಲ್ಲಿ ಮೂರು ಅಥವಾ ನಾಲ್ಕು ಕ್ಯಾಟಗರಿಗಳು ಇವೆ. ನ್ಯಾಷನಲ್ ಹೈವೇ, ಸ್ಟೇಟ್ ಹೈವೇಸ್, ಮೇಜರ್ ಡಿಸ್ಟ್ರಿಕ್ಟ್ ರೂಲ್‌ಗಳು ಇವೆ, ಗ್ರಾಮೀಣ ಪ್ರದೇಶಗಳಿಗೆ ಲಿಂಕ್ ಮಾಡತಕ್ಕಂಥ ರಸ್ತೆಗಳು ಇವೆ. ಕ್ರೈಟೇರಿಯಾ ಏನು ? ಶಾಸಕರು ಹೇಳಿದ ಐವತ್ತು ಕಿಲೋಮೀಟರ್ ತೆಗೆದುಕೊಳ್ಳುವುದು ಕ್ರೈಟೇರಿಯಾವೇ ? ಹಿಂದೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ರಸ್ತೆಗಳನ್ನು ಏನು ಟ್ರಾನ್ಸಫರ್ ಮಾಡಿಕೊಟ್ಟರು ಜಿಲ್ಲಾ ಪರಿಷತ್ತಿಗೆ, ಆ ರಸ್ತೆಗಳನ್ನು ತೆಗೆದುಕೊಳ್ಳುತ್ತೀರೋ ? ಅಥವಾ ಆರಸ್ತೆಗಳು ಅಲ್ಲದೇ ಇರತಕ್ಕಂಥದ್ದನ್ನು ನೀವು ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತೀರೋ ಹೇಗೆ ? ಈ ಯೋಜನೆಗಳಿಗೆ 10 ಸಾವಿರ ಕಿ.ಮೀ. ಈಗ ತೆಗೆದುಕೊಳ್ಳತಕ್ಕಂತಹ ಆಲೋಚನೆಯನ್ನು ತಾವು ಏನು ಮಾಡಿದ್ದೀರಿ, ಇದನ್ನು ಈಗಾಗಲೇ ಯೋಜನೆಯ ವ್ಯಾಪ್ತಿಗೆ ತಂದು ಎಲ್ಲಾ ಜಿಲ್ಲಾಪರಿಷತ್ತುಗಳು ಈ ರಸ್ತೆಗಳ ಅಭಿವೃದ್ಧಿಗಾಗಿ ಹಣ ನಿಗಧಿ ಮಾಡಿದ್ದಾರೆ, ಕಾರ್ಯವ್ಯಾಪ್ತಿ ನಿಗಧಿ ಮಾಡಿದ್ದಾರೆ, ಮತ್ತು ಅಲ್ಲಿ ಇರತಕ್ಕಂತಹ ತಾಂತ್ರಿಕ ವ್ಯವಸ್ಥೆಯನ್ನು ಏರ್ಪಾಡು ಮಾಡಿದ್ದಾರೆ. ಯಾವುದನ್ನು ಯೋಜನೆಯಲ್ಲಿ ಜಿಲ್ಲಾಪರಿಷತ್ತುಗಳು ಒಪ್ಪಿಕೊಂಡಿದ್ದಾರೋ ಆ ರೀತಿ ಒಪ್ಪಿಕೊಂಡಿರತಕ್ಕಂತಹ ಯೋಜನೆಗಳಲ್ಲಿ ಬಂದಿರತಕ್ಕಂತಹ ರಸ್ತೆಗಳನ್ನು ತಾವು ತೆಗೆದುಕೊಳ್ಳುತ್ತೀರೋ ಅಥವಾ ನೀವೇ ಹೊಸದಾಗಿ ಡಿಸ್‌ಕ್ರಿಷನ್ ಉಪಯೋಗಿಸಿ ತೆಗೆದುಕೊಳ್ಳುತ್ತೀರೋ? 50 ಕಿ.ಮೀ. ಅಂದರೆ 47 ಆಗಬಹುದು ಅಥವಾ 55 ಆಗಬಹುದು ಇದಕ್ಕೆ ಏನಾದರೂ ಸ್ವಲ್ಪ ರಿಲ್ಯಾಕ್ಸ್ ಇದೆಯೇ ಎಂದು ಕೇಳುತ್ತೇನೆ.

ಶ್ರಿ ಜಿ.ಹೆಚ್.ಅಶ್ವತ್ಥರೆಡ್ಡಿ:- ಮಾನ್ಯ ಅಧ್ಯಕ್ಷರೇ, ಶಾಸಕರು ಬಹಳ ಜವಾಬ್ದಾರಿ ಇರತಕ್ಕಂತಹ ಜನ, ಅವರಿಗೆ ಈ ಜಿಲ್ಲಾಪರಿಷತ್ತಿನ ರಸ್ತೆ ಚೆನ್ನಾಗಿಲ್ಲವೆಂದು ಗೊತ್ತಿದೆ. ಇದನ್ನು

ಅಪ್‌ಗ್ರೇಡೇಷನ್ ಮಾಡಿ ಒಳ್ಳೆಯ ರಸ್ತೆಯನ್ನು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒಳ್ಳೆಯ ಸಲಹೆ ಕೊಡಬೇಕು. ಶಾಸಕರು ಕೊಡಬೇಕಾದರೆ ಆ ರಸ್ತೆಗಳು ಚೆನ್ನಾಗಿ ಇರುವುದಿಲ್ಲ, ಪಿ.ಡಬ್ಲ್ಯೂ.ಡಿ. ನವರು ಚೆನ್ನಾಗಿ ಮಾಡಿಕೊಡಲೆಂದು ನಮಗೆ ಕೊಡುತ್ತೀರಿ. ಅದೇ ರೀತಿ 50 ಕಿ.ಮೀ. ಎಂದು ಏಕೆ ಹೇಳಿದ್ದೇವೆಂದರೆ ಒಬ್ಬರು 50 ರಿಂದ 100 ಕಿ.ಮೀ. ಕೇಳಬಹುದು. 45 ಕಿ.ಮೀ. ಅಂತೂ ಯಾರು ಕೇಳುವುದಿಲ್ಲ. ಅದ್ದರಿಂದ 50 ಕಿ.ಮೀ.ಗಿಂತ ಜಾಸ್ತಿ ಬೇಡವೆಂದು ನಿಗಧಿಪಡಿಸಿದ್ದೇವೆ. ಏತಕ್ಕೋಸ್ಕರವೆಂದರೆ ನಮಗೆ ಬಜೆಟ್‌ನಲ್ಲಿ ಟಾರ್‌ಗೆಟ್ ಇದೆ, ಸುಮಾರು 28 ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ಖರ್ಚು ಮಾಡಬೇಕೆಂದು ಇದೆ. ನೀವು ಹೇಳಿದಂತೆ ಮಾಡಬೇಕಾದರೆ ಅದಕ್ಕೆ ಪ್ಲಾನನ್ನು ರಿವೈಸ್ ಮಾಡಬೇಕು. ಅದು ಸ್ವಲ್ಪ ಕಷ್ಟವಾಗುತ್ತದೆ. ಸದ್ಯಕ್ಕೆ ಮಾತ್ರ ನಾವು 50 ಕಿ.ಮೀ. ಕೊಡಬೇಕೆಂದು ಒಪ್ಪಿಕೊಂಡಿದ್ದೇವೆ. ಅದು ಶಾಸಕರ ಕ್ಷೇತ್ರದಲ್ಲಿ ಕೊಡುತ್ತೇವೆ, ಕ್ರೈಟೀರಿಯಾ ಅಂದರೆ ಚೆನ್ನಾಗಿಲ್ಲದ ರಸ್ತೆಯೇ ಕ್ರೈಟೇರಿಯ. ಅದಕ್ಕೆ ಸರ್ಟಿಫಿಕೇಟ್ ತರುವುದು, ಪ್ರೊಸೀಜರ್ ಮೆಥೆಡ್ ಅದರೆ ಆಗುವುದಿಲ್ಲ. ಅವರನ್ನು ಕೇಳಿ, ಇವರನ್ನು ಕೇಳಿ, ಜಿಲ್ಲಾಪರಿಷತ್ತಿನಿಂದ ತರಿಸಿಕೊಂಡು ಮಾಡುವುದಕ್ಕಿಂತ ನಿಮಗೆ ಗೊತ್ತಿರುತ್ತದೆ, ನಿಮಗೆ ಜವಾಬ್ದಾರಿ ಇರುತ್ತದೆ, ನೀವು ಯಾವುದನ್ನು ಸಜೆಸ್ಟ್ ಮಾಡುತ್ತೀರಿ ಆ ಕೆಲಸವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :- ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾಪರಿಷತ್ತಿನ ರಸ್ತೆಗಳನ್ನು ಮೇಲದರ್ಜೆಗೆ ಏರಿಸುತ್ತೇವೆ ಎನ್ನುವಂತಹ ಆಶ್ವಾಸನೆಯನ್ನು ನಾವು ಕಳೆದ ಎರಡು ವರ್ಷದಿಂದ ಕೇಳುತ್ತಿದ್ದೇನೆ. ಇವರ ಹತ್ತಿರ ಕಳೆದ ಸಾರಿ ಕೇಳಿದ್ದೇವೆ, ಬರೀ ಕ್ಯಾಬಿನೆಟ್ ಮುಂದೆ ಇದೆಯೆಂದು ಹೇಳುತ್ತಾರೆ. ಇದೇ ರೀತಿ ಕ್ಯಾಬಿನೆಟ್ ಮುಂದೆ ಇದೆ ಕ್ಯಾಬಿನೆಟ್ ಮುಂದೆ ಇದೆ ಎಂದು ಹೇಳಿದರೆ ಹೇಗೆ ? ಇದರ ಅರ್ಥವೇನು?

ಅಧ್ಯಕ್ಷರು :-ಇಲ್ಲ, ಅವರು ಹೇಳಿದ್ದು ಕ್ಯಾಬಿನೆಟ್ ಒಳಗೆ ಇದೆಯೆಂದು, ಮುಂದೆ ಇದೆ ಎಂದು ಹೇಳಲಿಲ್ಲ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ :- ಒಳಗಾದರೂ ಒಂದೆ, ಮುಂದೆಯಾದರೂ ಒಂದೆ, 3-4 ವರ್ಷದಿಂದ ಅವರು ಉತ್ತರವನ್ನು ಕೊಟ್ಟಿಲ್ಲ, ಎಷ್ಟು ಸಾರಿ ಇದನ್ನು ಕೇಳಿದ್ದೇವೆ. ಅದ್ದರಿಂದ ಸ್ಪಷ್ಟವಾಗಿ ಇಂತಿಷ್ಟು ಸಮಯದಲ್ಲಿ ಮಾಡುತ್ತೇವೆ ಎನ್ನುವ ಆಶ್ವಾಸನೆ ಕೊಡಬೇಕು, ಆಗ ನಾವು ಜನರಿಗೆ ಹೇಳಬಹುದು. ಕಳೆಗ ಸಾರಿ ಮಳೆಗಾಲದಲ್ಲಿ ರಸ್ತೆ ಚೆನ್ನಾಗಿಲ್ಲದ ಕಾರಣ ಅಲ್ಲಿ ವಾಹನ ಸಂಚಾರ ಸ್ಥಗಿತವಾಗಿತ್ತು. ಇವರು ಅದನ್ನು ಬದಲಾವಣೆ ಮಾಡವುದಕ್ಕೆ ಆಗದೇ, ರಿಪೇರಿಯನ್ನು ಮಾಡುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ಕ್ಯಾಬಿನೆಟ್ ಮುಂದೆ ಇದೆ, ಕ್ಯಾಬಿನೇಟ್ ಒಳಗೆ ಇದೆ ಎನ್ನುವ ವಿಚಾರವನ್ನು ಹೇಳಿದರೆ, ನಾವು ಜವರಿಗೆ ಹೇಗೆ ಅರ್ಥ ಮಾಡಬಹುದು ?

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ಕ್ಯಾಬಿನೆಟ್ ಒಳಗೆ ಇದೆಯೆಂದು ಹೇಳಿದ್ದೇನೆ, ಸರ್ಕಾರದ ಆದೇಶ ಇಶ್ಯೂ ಆಗಿದೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರಿಗೆ ಅನುಮಾನವಿದೆ. ಅದು ಕ್ಯಾಬಿನೆಟ್‌ನಲ್ಲಿ ಪಾಸಾಗಿ ಸರ್ಕಾರದ ಆದೇಶ ಕೂಡ ಬಂದಿದೆ. ಪ್ರತಿವರ್ಷವೂ ನಾನು ಹೇಳಿದ್ದೇನೆ, ಇದು ಬರೀ ಆಶ್ವಾಸನೆಯಲ್ಲ, 28 ಕೋಟಿ ರೂಪಾಯಿಯನ್ನು ಅದಕ್ಕೋಸ್ಕರವೇ ತೆಗೆದಿಟ್ಟಿದ್ದೇವೆ. ಪ್ರತಿ ವರ್ಷವೂ 28 ಕೋಟಿ ರೂಪಾಯಿಯನ್ನು ಇಟ್ಟು ಸುಮಾರು 10 ಸಾವಿರ ಕಿ.ಮೀ.ಗೆ ಖರ್ಚು ಮಾಡುತ್ತೇವೆ. ಆದ್ದರಿಂದ ಯಾವ ತರಹದ ಅನುಮಾನ ಪಡಬೇಕಾಗಿಲ್ಲವೆಂದು ನಾನು ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಜಿ.ನಾಯಕ್ :- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ

ಸಚಿವರನ್ನು ಕೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಕೂಡ ಎರಡು ತಾಲ್ಲೂಕಿನಲ್ಲಿ ಇದೆ. ಅಲ್ಲಿ ಜಿಲ್ಲಾಪರಿಷತ್ತಿನ ರಸ್ತೆಗಳೆಲ್ಲಾ ಹಾಳಾಗಿ ಹೋಗಿವೆ. ಆ ರಸ್ತೆಗಳು ಸ್ವಲ್ಪವೂ ಚೆನ್ನಾಗಿಲ್ಲ. ಅದಕ್ಕೋಸ್ಕರ ಈಗ ನನ್ನ ಕ್ಷೇತ್ರಕ್ಕೆ ಎಷ್ಟು ಕೊಡುತ್ತಾರೆ ? ಮೊಳಕಾಲ್ಮೂರು ತಾಲ್ಲೂಕಿಗೆ ಎಷ್ಟು ಕೊಡುತ್ತಾರೆ ? ಚಳ್ಳಕೆರೆ ತಾಲ್ಲೂಕಿಗೆ ಎಷ್ಟು ಕಿ.ಮೀ. ರಸ್ತೆಯನ್ನು ಕೊಡುತ್ತಾರೆ ? ಇದನ್ನು ಆದಷ್ಟು ಜಾಗ್ರತೆ ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ನನಗೆ ಉತ್ತರ ಹೇಳಬೇಕು.

ಶ್ರೀ ಜಿ.ಹೆಚ್.ಆಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೆ ಉತ್ತರ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಸೇರಿದೆ ಎಂದು ಹೇಳುತ್ತಿದ್ದಾರೆ. ಈ ಎರಡು ತಾಲ್ಲೂಕುಗಳು ಸೇರಿದರೆ ಒಂದು ತಾಲ್ಲೂಕಿನಲ್ಲಿ 30 ಕಿ.ಮೀ. ಇನ್ನೊಂದು ತಾಲ್ಲೂಕಿನಲ್ಲಿ 20 ಕಿ.ಮೀ. ರಸ್ತೆಯನ್ನು ಕೊಡಲಿ, ಎರಡು ತಾಲ್ಲೂಕಿನಲ್ಲಿ ಒಂದು ಕ್ಷೇತ್ರ ಬರುತ್ತದೆ. ಅದರಿಂದ ಏನು ತೊಂದರೆಯಾಗುವುದಿಲ್ಲ.

ಶ್ರೀ ಎನ್.ಜಿ.ನಾಯಕ್ :- 57 ಕಿ.ಮೀ. ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಾನು ಆಗಲೇ ಎಸ್ಟಿಮೇಟ್‌ನ್ನು ಕಳುಹಿಸಿಕೊಟ್ಟಿದ್ದೇನೆ, ಅದು ಇದುವರೆಗೂ ಸ್ಯಾಂಕ್ಷನ್ ಆಗಿಲ್ಲ. ಈಗ ಮಾರ್ಚ್ ಕೊನೆಯಾಯಿತು. ದಯವಿಟ್ಟು ಯಾವಾಗ ಇದನ್ನು ಸ್ಯಾಂಕ್ಷನ್ ಮಾಡುತ್ತೀರಿ. ಯಾವಾಗ ಕೆಲಸ ಮಾಡುತ್ತೀರಿ, ಇದಕ್ಕೆ ದಯವಿಟ್ಟು ಉತ್ತರ ಹೇಳಬೇಕು.

ಶ್ರೀ ಜಿ.ಹೆಚ್. ಆಶ್ವತ್ಥರೆಡ್ಡಿ :- ಏಪ್ರಿಲ್ ತಿಂಗಳಿಂದ ಜಾರಿಗೆ ಬರುತ್ತದೆ.

ಅಧ್ಯಕ್ಷರು :- ನಾಯಕ್‌ರವರೆ, ಏಪ್ರಿಲ್ 1ನೇ ತಾರೀಖಿನವರೆಗೆ ಕಾಯಿರಿ.

ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವದ ವೆಚ್ಚ

(976)ಶ್ರೀ ಪೆರಿಕಲ್ .ಎಂ.ಮಲ್ಲಪ್ಪ (ಚಿಕ್ಕಪೇಟೆ)

ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ)

ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಔರಾದ್):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ 1992ರ ಜನವರಿ 24 ರಂದು ಬೆಂಗಳೂರಿನಲ್ಲಿ ನಡೆದ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆದ ಒಟ್ಟು ವೆಚ್ಚವೆಷ್ಟು ?

ಆ ಇದರಲ್ಲಿ ಕೇಂದ್ರ ಸರ್ಕಾರ ನೀಡಿದ ಹಣ

ಇ ರಾಜ್ಯ ಸರ್ಕಾರ ಮಾಡಿರುವ ವೆಚ್ಚ

ಈ ಕೇಂದ್ರ ಸರ್ಕಾರದಿಂದ ಬರಬೇಕಾಗಿರುವ ಹಣ

ಶ್ರೀ ಕೆ.ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ ರೂ. 3,03,42,254-00

ಆ ಇದರಲ್ಲಿ ಕೇಂದ್ರ ಸರ್ಕಾರ ಖರ್ಚು ಮಾಡಿರುವ ಹಣ ರೂ. 92.00ಲಕ್ಷಗಳು.

ಇ ಚಲನಚಿತ್ರೋತ್ಸವ ಏರ್ಪಡಿಸಲು ರೂ. 80,79,254-00
ತಗುಲಿದ ವೆಚ್ಚ.
ಚಲನಚಿತ್ರೋತ್ಸವ ಸಂದರ್ಭದಲ್ಲಿ ರೂ. 1,30,63.000-00
ಶಾಸ್ವತ ಕಾಮಗಾರಿ ಹಾಗೂ ಉಪಕರಣ
ಖರೀದಿ ಇತ್ಯಾದಿಗಳಿಗೆ ತಗುಲಿದ ವೆಚ್ಚ